## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 255/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹದೇವಶೆಟ್ಟಿ | ಪಿಡಬ್ಲ್ಯೂ : 5 |
| ತಂದೆಯ / ಗಂಡನ ಹೆಸರು | : ಸಿದ್ದಶೆಟ್ಟಿ | ಪಿಡಬ್ಲ್ಯೂ : 5 |
| ವಯಸ್ಸು | : 40 ವರ್ಷ | |
| ಉದ್ಯೋಗ | : ಗಾರೆ ಕೆಲಸ | |
| ವಾಸಸ್ಥಳ | : ಬೆಳವಾಡಿ , ಗುಂಡ್ಲುಪೇಟೆ ತಾಲ್ಲೂಕು, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 24.05.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಹುಣಸನಾಳು ಗ್ರಾಮದ ಮೃತ ಚಿಕ್ಕರಾಚಶೆಟ್ಟಿ ನನಗೆ ಗೊತ್ತಿತ್ತು. ಜಯಮ್ಮ ಅಂದರೆ ಚಾ,ಸಾ. 8 ಚಿಕ್ಕರಾಚಶೆಟ್ಟಿಯ ಹೆಂಡತಿ. ಆಕೆ ನನಗೆ ಸೋದರತ್ತೆ ಆಗಬೇಕು. ಸುಮಾರು ದಿನಗಳ ನಂತರ ಚಿಕ್ಕರಾಚಶೆಟ್ಟಿಗೆ ಇನ್ನೂಂದು ಮದುವೆಯಾಗಿರುತ್ತದೆ ಎಂದು ಊರಿನಲ್ಲಿ ಗೊತ್ತಾಯಿತು. ಜಯಮ್ಮ ಹಾಗೂ ಚಿಕ್ಕರಾಚಶೆಟ್ಟಿಗೆ ಇಬ್ಬರು ಗಂಡು ಮಕ್ಕಳು. ಸುಮಾರು 15-20 ವರ್ಷಗಳ ಕಾಲ ಚಿಕ್ಕರಾಚಶೆಟ್ಟಿ ಹಿರಿಯ ಮತ್ತು ಕಿರಿಯ ಹೆಂಡತಿಯರೊಂದಿಗೆ ಹುಣಸನಾಳು ಗ್ರಾಮದಲ್ಲಿ ಮಕ್ಕಳೊಂದಿಗೆ ವಾಸ ಇದ್ದರು. ನಂತರ ಹಿರಿಯ ಮತ್ತು ಕಿರಿಯ ಹೆಂಡತಿಯ ನಡುವೆ ಜಮೀನಿನ ಬಗ್ಗೆ ವ್ಯಾಜ್ಯ ಉಂಟಾಗಿ, ಗಲಾಟೆಯಾಗಿ ಜಯಮ್ಮ ನಮ್ಮ ಊರಿಗೆ ಅಂದರೆ ಬೆಳವಾಡಿಗೆ ಬಂದರು. ಅಲ್ಲಿ ಆಕೆಗೆ ಯಾರು ಇರಲಿಲ್ಲ. ನಂತರ ಹುಣಸನಾಳು ಗ್ರಾಮಕ್ಕೆ ಹೋದರು. ಪುನಃ ಹೆಂಡತಿಯರ

ನಡುವೆ ಗಲಾಟೆ ಆಗಿ , ಕೊನೆಗೆ ಚಿಕ್ಕರಾಚಶೆಟ್ಟಿ ಮತ್ತು ಆತನ 2 ನೇ ಹೆಂಡತಿ ಹಾಗೂ ಮಕ್ಕಳು ಹಾಗೂ ಕಿರಿಯ ಮಗ ಎಲ್ಲರು ಒಟ್ಟಾಗಿ ಬಂದು ಹುಲ್ಲೇಪುರದಲ್ಲಿ ವಾಸ ಮಾಡಲು ಪ್ರಾರಂಭಿಸಿದರು.

2. ಹೀಗ್ಗೆ ಒಂದು ವರ್ಷದ ಹಿಂದೆ ಚಿಕ್ಕರಾಚಶೆಟ್ಟಿ ನಂಜನಗೂಡಿನಲ್ಲಿ ಒಂದು ಮದುವೆ ಇದೆ ಎಂದು ಹುಲ್ಲೆಪುರದಿಂದ ನಂಜನಗೂಡಿಗೆ ಬಂದರು. ಸೈಟ್ ಗಳ ಅಳತೆ ಮಾಡಿಸುವುದು ಇದೆ ಎಂದು ಮದುವೆ ಮೂಗಿಸಿಕೂಂಡು ಹುಣಸನಾಳು ಗ್ರಾಮಕ್ಕೆ ಹೋದರು. ಅದೇ ದಿನ ಸಂಜೆ 06.30 ರ ಸಮಯಕ್ಕೆ ನಾನು ಜಮೀನು ಕೆಲಸಕ್ಕೆ ಹೋಗಿ ಮುಗಿಸಿಕೂಂಡು ವಾಪಾಸ್ಸು ಮನೆಗೆ ಬರುತ್ತಿದ್ದಾಗ ನಮ್ಮ ಬೆಳವಾಡಿಯಲ್ಲಿ ಜನರು ಗುಂಪುಗೂಡಿದ್ದರು. ಅಲ್ಲಿ ಜನರು ನನಗೆ "ನಿನ್ನ ಅತ್ತೆಯ ಗಂಡನನ್ನು ಹೊಡೆದು ಸಾಯಿಸಿದ್ದಾರಂತೆ " ಎಂದು ಹೇಳಿದರು. ಆಗ ಎಲ್ಲರು ಹುಲ್ಲೇಪುರಕ್ಕೆ ಹೋದೆವು. ನನ್ನ ಅತ್ತೆಯ ಗಂಡ ಸೈಟನ್ನು ಅಳತೆ ಮಾಡಿಸಲು ಹೋಗಿದ್ದರಂತೆ . ಹಿರಿಯ ಹೆಂಡತಿಯ ಮಕ್ಕಳು ಅದಕ್ಕೆ ಒಪ್ಪಲಿಲ್ಲವಂತೆ ಮತ್ತು ಅವರು ಚಿಕ್ಕರಾಚಶೆಟ್ಟಿಯನ್ನು ಹೊಡೆದು ಸಾಯಿಸಿದ್ದರಂತೆ ಎಂದು ತಿಳಿದು ಬಂತು.

3. ಮರು ದಿನ ಬೆಳಿಗ್ಗೆ ನಂಜನಗೂಡು ಆಸ್ಪತ್ರೆಗೆ ಬಂದೆ. ಅಲ್ಲಿ ಪೋಲೀಸರು ಶವವನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು. ಆಗ ನಾನು ಕೆ ಆರ್ ಆಸ್ಪತ್ರೆ ಗೆ ಬಂದೆ. ಶವವನ್ನು ಶವಾಗಾರದಲ್ಲಿ ಇರಿಸಿದ್ದರು. ಅರ್ಧ ಗಂಟೆಯ ನಂತರ ನಂಜನಗೂಡು ಗ್ರಾಮಾಂತ ಠಾಣೆಯ ಪೋಲೀಸರು ಬಂದರು. ಶವವನ್ನು ನಮಗೆ ತೋರಿಸಿದರು. ಶವವನ್ನು ನೋಡಿದಾಗ ಆತನ ತಲೆ , ಮುಖಕ್ಕೆಲ್ಲಾ ರಕ್ತ ಗಾಯವಾಗಿದ್ದವು. ಕಾಲುಗಳಿಗೆ ಗಾಯವಾಗಿತ್ತು. ಆ ಸ್ಥಳದಲ್ಲಿ ನಾನು ಮತ್ತು ನನ್ನ ಅತ್ತೆ ಹಾಗೂ ನಮ್ಮ

ಊರಿನವರು ಇದ್ದರು. ಅಲ್ಲಿ ಪೋಲೀಸರು ಏನೇನು ಬಟ್ಟೆಯನ್ನು ಹಾಕಿದ್ದರು, ಗಾಯಗಳು ಎಲ್ಲೆಲ್ಲಿ ಆಗಿದ್ದವು ಎನ್ನುವ ಬಗ್ಗೆ ಬರವಣಿಗೆಯನ್ನು ಮಾಡಿದರು. ನಂತರ ಪೋಲೀಸರು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

4. ಪೋಲೀಸರು ಅಲ್ಲಿ ನನ್ನನ್ನು ಕೇಳಿ ಹೇಳಿಕೆಯನ್ನು ಪಡೆದಾಗ ಬೆಳಿಗ್ಗೆ 10.00 ಗಂಟೆ ಆಗಿತ್ತು. ನನಗೆ ಚಿಕ್ಕರಾಚಶೆಟ್ಟಿರ ಮೊದಲನೇ ಹೆಂಡತಿಯ ಮಕ್ಕಳ ಹೆಸರು ಗೊತ್ತಿಲ್ಲ. ಪೋಲೀಸರಿಗೆ ಹೇಳಿಕೆ ನೀಡುವಾಗ ಚಿಕ್ಕರಾಚಶೆಟ್ಟಿಯ ಹೆಂಡತಿ 2 ನೇ ಆರೋಪಿ ಬಸಮ್ಮಳ ಮಕ್ಕಳ ಹೆಸರುಗಳನ್ನು ನಾನು ಹೇಳಿರುವುದಿಲ್ಲ. ಸದರಿ ಭಾಗವನ್ನು ನಿಡಿ 1 ಎಂದು ಗುರುತುಪಡಿಸಿಕೊಳ್ಳಲಾಯಿತು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಮೇಲೆ ಹೇಳಿದ , "ಸುಮಾರು 15-20 ವರ್ಷಗಳ ಕಾಲ ಚಿಕ್ಕರಾಚಶೆಟ್ಟಿ ಹಿರಿಯ ಮತ್ತು ಕಿರಿಯ ಹೆಂಡತಿಯರೊಂದಿಗೆ ಹುಣಸನಾಳು ಗ್ರಾಮದಲ್ಲಿ ಮಕ್ಕಳೊಂದಿಗೆ ವಾಸ ಇದ್ದರು. ನಂತರ ಹಿರಿಯ ಮತ್ತು ಕಿರಿಯ ಹೆಂಡತಿಯ ನಡುವೆ ಜಮೀನಿನ ಬಗ್ಗೆ ವ್ಯಾಜ್ಯ ಉಂಟಾಗಿ, ಗಲಾಟೆಯಾಗಿ ಜಯಮ್ಮ ನಮ್ಮ ಊರಿಗೆ ಅಂದರೆ ಬೆಳವಾಡಿಗೆ ಬಂದರು. ಅಲ್ಲಿ ಆಕೆಗೆ ಯಾರು ಇರಲಿಲ್ಲ. ನಂತರ ಹುಣಸನಾಳು ಗ್ರಾಮಕ್ಕೆ ಹೋದರು. ಪುನಃ ಹೆಂಡತಿಯರ ನಡುವೆ ಗಲಾಟೆ ಆಗಿ , ಕೊನೆಗೆ ಚಿಕ್ಕರಾಚಶೆಟ್ಟಿ ಮತ್ತು ಆತನ 2 ನೇ ಹೆಂಡತಿ ಹಾಗೂ ಮಕ್ಕಳು ಹಾಗೂ ಕಿರಿಯ ಮಗ ಎಲ್ಲರು ಒಟ್ಟಾಗಿ ಬಂದು ಹುಲ್ಲೇಪುರದಲ್ಲಿ ವಾಸ ಮಾಡಲು ಪ್ರಾರಂಭಿಸಿದರು." ವಿಷಯವನ್ನು ಪೋಲೀಸರ ಮುಂದೆ ಹೇಳಿರುತ್ತೇನೆ.

5. ನಾನು ಪೋಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ , " ಅದೇ ದಿನ ಸಂಜೆ 06.30 ರ ಸಮಯಕ್ಕೆ ನಾನು ಜಮೀನು ಕೆಲಸಕ್ಕೆ ಹೋಗಿ ಮುಗಿಸಿಕೊಂಡು ವಾಪಾಸ್ಸು ಮನೆಗೆ ಬರುತ್ತಿದ್ದಾಗ ನಮ್ಮ ಬೆಳವಾಡಿಯಲ್ಲಿ ಜನರು ಗುಂಪುಗೂಡಿದ್ದರು. ಅಲ್ಲಿ ಜನರು ನನಗೆ "ನಿನ್ನ ಅತ್ತೆಯ ಗಂಡನನ್ನು ಹೊಡೆದು ಸಾಯಿಸಿದ್ದಾರಂತೆ " ಎಂದು ಹೇಳಿದರು. ಆಗ ಎಲ್ಲರು ಹುಲ್ಲೇಪುರಕ್ಕೆ ಹೋದೆವು. ನನ್ನ ಅತ್ತೆಯ ಗಂಡ ಸೈಟನ್ನು ಅಳತೆ ಮಾಡಿಸಲು ಹೋಗಿದ್ದರಂತೆ . ಹಿರಿಯ ಹೆಂಡತಿಯ ಮಕ್ಕಳು ಅದಕ್ಕೆ ಒಪ್ಪಲಿಲ್ಲವಂತೆ ಮತ್ತು ಅವರು ಚಿಕ್ಕರಾಚಶೆಟ್ಟಿಯನ್ನು ಹೊಡೆದು ಸಾಯಿಸಿದ್ದರಂತೆ ಎಂದು ತಿಳಿದು ಬಂತು", ಎಂದು ಪೋಲೀಸರ ಮುಂದೆ ಹೇಳಿರುತ್ತೇನೆ. ಹಾಗೆಯೇ , ಹುಲ್ಲೇಪುರದಿಂದ ನಂಜನಗೂಡಿನ ಆಸ್ಪತ್ರೆಗೆ ಹೋದೆವು ಎಂದು ಸಹ ಪೋಲೀಸರ ಮುಂದೆ ಹೇಳಿರುತ್ತೇನೆ. ಈಗ ಮೇಲೆ ಹೇಳಿದ ಯಾವುದೇ ವಿಷಯಗಳನ್ನು ನಾನು ಪೋಲೀಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಂಜನಗೂಡು ಪೋಲೀಸರು ಆಸ್ಪತ್ರೆಯಲ್ಲಿದ್ದರು. ಆಗ ನಾವು ಪೋಲೀಸ್ ಠಾಣೆಗೆ ಹೋಗುವ ಪ್ರಯತ್ನ ಮಾಡಲಿಲ್ಲ. ನಂಜನಗೂಡು ಪೋಲೀಸ್ ಠಾಣೆಯಲ್ಲಿ ಈಗ ನಾನು ಮೇಲೆ ಹೇಳಿದ ವಿಷಯಗಳನ್ನು ಪೋಲೀಸರ ಮುಂದೆ ತಿಳಿಸುವ ಪ್ರಯತ್ನ ಮಾಡಿರಲಿಲ್ಲ.

6. ಚಿಕ್ಕರಾಚಶೆಟ್ಟಿಯನ್ನು ನಾನು ಅವರು ನಂಜನಗೂಡು ಮದುವೆಗೆ ಬರುವ 3 ದಿನಗಳ ಹಿಂದೆ ನೋಡಿದ್ದೆ. ನಂತರ ಅವರನ್ನು ಶವವಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ನೋಡಿದ್ದೆ ಎನ್ನುವುದು ಸರಿಯಲ್ಲ. ಅವರ ಸಾವಾದ ನಂತರ , ಒಂದು ವಾರಗಳ ನಂತರ ನೆಂಟರಿಷ್ಟರು ಸೇರಿ ಈ ರೀತಿ ಕಥೆ ಕಟ್ಟಿರುತ್ತೇವೆ ಎನ್ನುವುದು ಸರಿಯಲ್ಲ. ಒಂದು ವಾರದ ನಂತರ ಪೋಲೀಸ್ ಠಾಣೆಯಲ್ಲಿ ನನ್ನ ಶವ ತನಿಖಾ ಹೇಳಿಕೆಯನ್ನು ತಯಾರಿಸಿರುತ್ತಾರೆ

ಎನ್ನುವುದು ಸರಿಯಲ್ಲ. ಆರೋಪಿತರಿಗೂ ಮತ್ತು ಚಿಕ್ಕರಾಚಶೆಟ್ಟಿಯ ಸಾವಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ, ಈ ಆಪಾದನೆ ಚಾ,ಸಾ. 2 ರವರ ಮೇಲೆ ಬರುತ್ತದೆ ಎನ್ನುವ ಕಾರಣಕ್ಕಾಗಿ ಸುಳ್ಳು ಕಥೆ ಕಟ್ಟಿರುತ್ತೇವೆ ಮತ್ತು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**